# ಕನಸು ಕೈಗೂಡಿದೆ



**ಅಕ್ಷತಾ ದೇಶಪಾಂಡೆ**
**ಸ್ಟಾರ್ ಸುವರ್ಣ 'ಮತ್ತೆ ವಸಂತ'ದ ಅಪರ್ಣಾ**

◆ **ನಟನೆಯನ್ನು ಆರಂಭಿಸಿದ್ದು ಹೇಗೆ?**

ಬೆಳಗಾವಿ ಮೂಲ. ಪದವಿ ಓದುವಾಗಲೇ ಕಿರುತೆರೆಯ ನಂಟು ಬೆಳೆಯಿತು. ಮೊದಲ ಧಾರಾವಾಹಿ 'ಅಮೃತವರ್ಷಿಣಿ'. ಇದು ಎರಡನೇ ಧಾರಾವಾಹಿ. ಮೊದಲ ವರ್ಷದ ಪದವಿಯಲ್ಲಿ ಅವಕಾಶ ಸಿಕ್ಕಿತು. ಆರಂಭದಿಂದಲೂ ನಟಿ ಆಗಬೇಕು ಎನ್ನುವ ಕನಸು ಇತ್ತು. ನಾನು ಪಿಯು ಸೇರಿದಾಗ ನಮ್ಮ ಅಧ್ಯಾಪಕರು ಮುಂದಿನ ಕನಸಿನ ಬಗ್ಗೆ ಕೇಳಿದ್ದರು. ನಾನು ನಟಿ ಆಗುತ್ತೇನೆ ಎನ್ನುವ ಆಸೆಯನ್ನು ವ್ಯಕ್ತಪಡಿಸಿದ್ದೆ. ನನ್ನ ಸಹಪಾಠಿಗಳೆಲ್ಲ ನಕ್ಕು ನನ್ನ ಬಗ್ಗೆ ಕಣ್ಣೋಟದಲ್ಲಿಯೇ ತಾತ್ಸರವನ್ನು ತೋರಿಸಿದ್ದರು. ಹೇಗೆ ಪ್ರವೇಶ ಮಾಡಬೇಕು ಎನ್ನುವುದೂ ಗೊತ್ತಿರಲಿಲ್ಲ. ನನಗೆ ಪರಿಚಿತರಾರೂ ಈ ಕ್ಷೇತ್ರದಲ್ಲಿ ಇರಲಿಲ್ಲ. ಹಾಗಾಗಿ ಆರಂಭದಲ್ಲಿ ಸ್ವಲ್ಪ ಪರಿಶ್ರಮ ಪಡಬೇಕಾಯಿತು.

◆ **ನಿಮ್ಮ ಪ್ರಯತ್ನದ ಅನುಭವವನ್ನು ಸ್ಮರಿಸಬಹುದಾ?**

ತುಂಬ ಅನುಭವಗಳು ಆಗಿವೆ. ಮೊದಲು ಎಲ್ಲರಂತೆ ನನಗೂ ನಟನೆ ಎಂದರೆ ಏನೆಂದು ಗೊತ್ತಿರಲಿಲ್ಲ. ಆದರೂ ಆಡಿಷನ್ನಿಗೆ ಪ್ರಯತ್ನ ಮಾಡುತ್ತಿದ್ದೆ. ಯಾವುದಾದರೂ ಆಡಿಷನ್ ಇದ್ದರೆ ರಾತ್ರಿ ಬೆಳಗಾವಿಯಿಂದ ಬೆಂಗಳೂರಿಗೆ ಬಂದು ಮುಗಿಸಿಕೊಂಡು ಪುನಃ ರಾತ್ರಿ ನನ್ನೂರ ಬಸ್ಸು ಹತ್ತುತ್ತಿದ್ದೆ. ಹೀಗಿರುವಾಗ ಒಂದು ಸೀರಿಯಲ್‌ಗೆ ನನ್ನನ್ನು ಆಯ್ಕೆ ಮಾಡಿಕೊಂಡಿದ್ದರು. ನನಗೆ ತರಬೇತಿ ನೀಡಲು ಆಹ್ವಾನ ನೀಡಿದರು. 15–20 ದಿನ ತರಬೇತಿಯನ್ನೂ ನೀಡಿದರು. ನಾಳೆ ಪ್ರೊಮೊ ಚಿತ್ರೀಕರಣಕ್ಕೆ ಹೋಗುವಾಗ ನನ್ನ ಪಾತ್ರಕ್ಕೆ ಬೇರೆಯವರನ್ನು ತೆಗೆದುಕೊಂಡಿರುವುದಾಗಿ ಹೇಳಿದರು. ಕಾಸ್ಟ್ಯೂಮ್ಸ್ ಶಾಪಿಂಗ್ ಮಾಡಿದ್ದೆ ಅದಕ್ಕಾಗಿ ಸುಮಾರಷ್ಟು ಹಣವನ್ನು ಖರ್ಚುಮಾಡಿದ್ದೆ. ಆ ಸಮಯದಲ್ಲಿ ತುಂಬ ನೋವು ಅನುಭವಿಸಿದ್ದೆ. ಸಿಕ್ಕಾಪಟ್ಟೆ ಕಣ್ಣೀರು ಹಾಕಿದ್ದೇನೆ. ಇದು ಸರಿ ಹೋಗಲಿಕ್ಕಿಲ್ಲ ಓದಿ ಯಾವುದಾರೂ ಉದ್ಯೋಗ ಮಾಡಿದರಾಯಿತು ಎಂದು ಯೋಚಿಸಿ ಊರಿಗೆ ಹೋದೆ. ಅಷ್ಟರಲ್ಲಿ ಕೆಲವೊಂದು ಆಡಿಷನ್ ಕೊಟ್ಟಿದ್ದೆ. ಎರಡು ಮೂರು ತಿಂಗಳ ಬಳಿಕ 'ಅಮೃತವರ್ಷಿಣಿ'ಗೆ ಆಯ್ಕೆ ಆಗಿದ್ದೀರಿ ಲುಕ್ ಟೆಸ್ಟ್‌ಗೆ ಬರಬೇಕಾಗುತ್ತೆ ಎಂದು ಫೋನ್ ಮಾಡಿದ್ದರು. ನಾನು ಬರಲು ಆಗುವುದಿಲ್ಲ. ನಾನೇ ಆಯ್ಕೆ ಆಗಿದ್ದೇನೆ ಎನ್ನುವುದು ಖಚಿತ ಆದರೆ ಮಾತ್ರ ಬರುವುದಾಗಿ ತಿಳಿಸಿದೆ. ಅದಕ್ಕೆ ಭರವಸೆ ಸಿಕ್ಕಿದ್ದರಿಂದ ಬಂದೆ ಇಲ್ಲದಿದ್ದರೆ ನಾನು ನಟಿಯಾಗುವುದು ಕನಸಾಗಿಯೇ ಉಳಿಯುತ್ತಿತ್ತು. ಇದಕ್ಕಾಗಿ ತುಂಬ ಕಷ್ಟ ಪಟ್ಟಿದ್ದೇನೆ.

◆ **ಈಗ ನಿಮಗೆ ಇಲ್ಲಿ ನೆಲೆ ನಿಲ್ಲುವ ಭರವಸೆ ಮೂಡಿದೆಯಾ?**

'ಅಮೃತವರ್ಷಿಣಿ'ಯ ನಂತರ ಕೂಡಲೇ 'ಮತ್ತೆ ವಸಂತ'ಕ್ಕೆ ಅವಕಾಶ ಸಿಕ್ಕಿತು. ಆಗ ನಾನೇ ಒಪ್ಪಲು ಸ್ವಲ್ಪ ಸಮಯ ತೆಗೆದುಕೊಂಡೆ. ಡಿಗ್ರಿ ಮುಗಿಸಬೇಕು ಎನ್ನುವ ಉದ್ದೇಶವೂ ಇತ್ತು. ಓದುತ್ತಲೇ ಪಾತ್ರಕ್ಕೂ ಒಪ್ಪಿದೆ ಅದು ತುಂಬ ಒಳ್ಳೆಯ ಕೆಲಸ ಎಂದು ನಾನು ಅಂದುಕೊಂಡಿದ್ದೇನೆ. ಈಗ ನನ್ನ ಓದೂ ಮುಗಿದಿದೆ. ನನ್ನ ಕನಸಿನ ಕ್ಷೇತ್ರದಲ್ಲಿಯೇ ನೆಲೆ ನಿಲ್ಲುತ್ತೇನೆ ಎನ್ನುವ ಭರವಸೆಯೂ ಬಂದಿದೆ. ಈಗ ನನ್ನ ಅಭಿನಯವೂ ಚೆನ್ನಾಗಿ ಆಯ್ತು. ನಟನೆ ನನಗೆ ಪ್ಯಾಶನ್. ಇಷ್ಟಪಟ್ಟು ಬಂದಿದ್ದೇನೆ. ಅಂದರೆ ಇಲ್ಲೇ ನೆಲೆ ನಿಲ್ಲಬೇಕು. ಭಿನ್ನ ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು. ಮುಂದೆ ಸಿನಿಮಾಗಳಿಗೆ ಅವಕಾಶ ಸಿಕ್ಕರೂ ಹೋಗುತ್ತೇನೆ. ನನಗೆ ಪಾತ್ರದ ಬಗ್ಗೆ ವಿಶ್ವಾಸ ಮೂಡಬೇಕು ಚೆನ್ನಾಗಿದೆ ಅನ್ನಿಸಿದರೆ ಮಾತ್ರ. ಕ್ಯಾಮೆರಾ ಮುಂದೆ ನಿಲ್ಲುವುದು ಎಂದರೆ ತುಂಬ ಖುಷಿ ಪಡುತ್ತೇನೆ. ನಾನು ನನ್ನ ವೃತ್ತಿಯನ್ನು ತುಂಬ ಪ್ರೀತಿಸುತ್ತೇನೆ.

◆ **ಬೆಂಗಳೂರಿನ ಜೀವನ ಹೇಗಿದೆ?**

ನಮ್ಮೂರಲ್ಲಿ ನಾನು ತೀರ ಸರಳವಾಗಿದ್ದೆ. ಜವಾಬ್ದಾರಿಗಳು ಇರಲಿಲ್ಲ. ನಾನು ಸ್ವಾವಲಂಬಿಯಾಗುತ್ತೇನೆ ಎನ್ನುವುದು ಗೊತ್ತಿರಲಿಲ್ಲ. ಸ್ನೇಹಿತರ ಜೊತೆ ಸುತ್ತಾಟ, ಅಪ್ಪ–ಅಮ್ಮನ ಬೆಚ್ಚನೆ ಪ್ರೀತಿಯಲ್ಲಿ ಇರೋದು ತುಂಬ ಚೆನ್ನಾಗಿತ್ತು. ನನಗೆ ಬೆಳಗಾವಿ ಎನ್ನುವುದೇ ಭಾವುಕತೆಯನ್ನು ಹುಟ್ಟುಹಾಕುವ ಸೆಲೆ. ಬೆಂಗಳೂರು ನನಗೆ ಜೀವನ ಕೊಟ್ಟಿದೆ. ಇಲ್ಲಿ ನನ್ನ ಅನ್ನವನ್ನು ನಾನು ಸಂಪಾದಿಸುವ ಸಾಮರ್ಥ್ಯವನ್ನು ಕಲಿತಿದ್ದೇನೆ. ಮುಂದೆ ಒಳ್ಳೆಯ ಅವಕಾಶಕ್ಕಾಗಿ ಕಾಯುತ್ತಿದ್ದೇನೆ, ಪಾತ್ರವೇ ಬಹಳ ಮುಖ್ಯ. ಯಾವುದಾದರೂ ಸಿನಿಮಾ– ಅಥವಾ ಧಾರಾವಾಹಿ ನೋಡಿದಾಗ ಇಂತಹ ಪಾತ್ರ ಮಾಡಬೇಕು ಎಂದು ಅನ್ನಿಸುತ್ತದೆ. ಭಿನ್ನ ಭಿನ್ನ ಪಾತ್ರಗಳನ್ನು ಮಾಡುವ ಆಸೆ ಇದೆ.

◆ **ಮತ್ತೆ ವಸಂತದಲ್ಲಿ ಅಪರ್ಣಾಳ ಪ್ರಾಮುಖ್ಯತೆ ಏನು?**

ಅಪರ್ಣಾ ನೇರ ನಡೆ– ನುಡಿ ಇರುವ ಹುಡುಗಿ. ಮನೆಯ ಎಲ್ಲ ಜವಾಬ್ದಾರಿಗಳನ್ನು ನಿರ್ವಹಿಸುತ್ತಾಳೆ. ಅವಳಿಗೆ ಎದುರಾಗುವ ಯಾವ ಸವಾಲಿಗೂ ಹಿಂಜರಿಯದೆ ದಿಟ್ಟವಾಗಿ ಎದುರಿಸುತ್ತಾಳೆ. ಅಕ್ಷತಾಳಿಗೆ ಬಹುತೇಕ ಹೋಲಿಕೆಯಾಗುವ ಗುಣಧರ್ಮ ಆಕೆಯಲ್ಲಿದೆ. ಯಾವ ಭಾವನೆಗಳನ್ನೂ ಮುಚ್ಚಿಟ್ಟುಕೊಳ್ಳುವುದಿಲ್ಲ. ಜೀವನ ಎಂದರೆ ಸಮಸ್ಯೆಗಳ ಸರಮಾಲೆ ಅವುಗಳನ್ನು ಎದುರಿಸುತ್ತಾ ಹೋಗಬೇಕು ಎನ್ನುವುದನ್ನು ಈ ಪಾತ್ರ 'ಮತ್ತೆ ವಸಂತ'ದ ಮೂಲಕ ಹೇಳುತ್ತದೆ.

■ **ರಾಘವೇಂದ್ರ ಕೆ.**